# ರಾಮಕೃಷ್ಣ ಮಹಾಸಂಘದ ಉಗಮ – ಒಂದು ರೋಮಾಂಚಕ ಕತೆ

(ಹಿಂದಿನ ಸಂಚಿಕೆಯಿಂದ)

## ಸಂಘಜನನಿ ಶ್ರೀಶಾರದಾದೇವಿ

ಶ್ರೀರಾಮಕೃಷ್ಣರ ವ್ಯಾಧಿ ಅವರ ಯುವಕ ಶಿಷ್ಯರನ್ನೆಲ್ಲ ಭಾವನಾತ್ಮಕವಾಗಿಯೂ ಸಾಂಘಿಕವಾಗಿಯೂ ಒಂದುಗೂಡಿಸಿತು. ಗುರುದೇವರ ನಿರ್ಯಾಣಾನಂತರ ಅವರ ಆದರ್ಶದ ರೂವಾರಿಗಳಾಗಲು ಅವರೆಲ್ಲ ಸಂನ್ಯಾಸವ್ರತವನ್ನು ಸ್ವೀಕರಿಸಿದರು. ಆದರೆ ಆ ಯುವಕರ ಹುಮ್ಮಸ್ಸನ್ನು, ತ್ಯಾಗಬುದ್ಧಿಯನ್ನು ಹುಡುಗಾಟವೆಂದು ಬಗೆದವರೇ ಹೆಚ್ಚು ಮಂದಿ. ಶ್ರೀರಾಮಕೃಷ್ಣರ ಗೃಹಸ್ಥ ಭಕ್ತರಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ, ಮಿಕ್ಕವರೆಲ್ಲ ಈ ಯುವಸಂನ್ಯಾಸಿಗಳ ನಿರ್ಧಾರ ಯುಕ್ತವಲ್ಲವೆಂದೇ ಪರಿಗಣಿಸಿದ್ದರು. ಆ ಯುವಭಕ್ತರ ಪಾಲಿಗೆ ಅದೊಂದು ವಿಷಮಗಳಿಗೆ. ಸ್ವಾಮಿ ವಿವೇಕಾನಂದರು ಆ ದುರವಸ್ಥೆಯ ಕಾಲವನ್ನು. ತಮ್ಮ ಒಂದು ಪ್ರವಚನದಲ್ಲಿ ಹೀಗೆ ಬಣ್ಣಿಸುತ್ತಾರೆ:




"ನಾನು ಎರಡು ಪ್ರಪಂಚಗಳ ನಡುವೆ ನಿಲ್ಲಬೇಕಾಯಿತು. ಒಂದು ಕಡೆ ನನ್ನ ತಾಯಿ ಮತ್ತು ಸಹೋದರರು ಪ್ರಾಣ ಹೋಗುವವರೆಗೆ ಉಪವಾಸ ಮಾಡುವುದನ್ನು ನೋಡಬೇಕಾಗಿತ್ತು. ಮತ್ತೊಂದು ಕಡೆ, ಆ ಮಹಾಪುರುಷನ ಸಂದೇಶವನ್ನು ಭರತಖಂಡದ ಉದ್ಧಾರಕ್ಕೆ ಬೋಧಿಸಬೇಕು ಮತ್ತು ಕಾರ್ಯರೂಪಕ್ಕೆ ತರಬೇಕು. ಇದರಿಂದಾಗಿ ಹಲವು ದಿನಗಳು ನನ್ನ ಮನಸ್ಸಿನಲ್ಲಿ ಹೋರಾಟ ನಡೆಯಿತು. ಹಲವು ವೇಳೆ ಹಗಲು ರಾತ್ರಿ ನಾನು ಎಡೆಬಿಡದೆ ಪ್ರಾರ್ಥಿಸುತ್ತಿದ್ದೆ. ಅಬ್ಬ, ಆ ದಿನಗಳ ಹಿಂಸೆ! ಆಗ ನಾನೊಂದು ನರಕದಲ್ಲಿ ವಾಸಿಸುತ್ತಿದ್ದೆ... ನನಗೆ ಸಹಾನುಭೂತಿಯನ್ನು ತೋರುವವರು ಯಾರೂ ಇರಲಿಲ್ಲ, ಒಬ್ಬರ ವಿನಾ. ಆ ಒಬ್ಬರ ಸಹಾನುಭೂತಿ ನನಗೆ ನೆಚ್ಚಿಗೆಯನ್ನು ತಂದಿತು, ಆಶೀರ್ವಾದವನ್ನು ಕರುಣಿಸಿತು. ಆಕೆ ಒಬ್ಬ ಮಹಿಳೆ..." ಶ್ರೀಮಾತೆ ಶಾರದಾದೇವಿಯವರೇ ಆ ಮಹಿಳೆ ಎನ್ನುವುದು ಹಗಲ ಸೂರ್ಯನಂತೆ ಸುಸ್ಪಷ್ಟ. ಹೀಗೆ ಶ್ರೀಮಾತೆಯವರು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಪುತ್ರರಿಗೆ ತಾಯಿಯ ಅಕ್ಕರೆಯನ್ನೂ ರಕ್ಷಣೆಯನ್ನೂ ನೀಡಿ, ಶ್ರೀರಾಮಕೃಷ್ಣರ ಜೀವಂತ ಪ್ರತೀಕವಾಗಿ ನಿಂತರು.

೧೮೯೦ ರ ಸಮಯ. ಶ್ರೀಮಾತೆಯವರು ಬುದ್ಧಗಯೆಗೆ ತೀರ್ಥಯಾತ್ರೆಗೆ ಬಂದಿದ್ದಾರೆ. ಅಲ್ಲಿನ ದೊಡ್ಡ ದೊಡ್ಡ ಬೌದ್ಧ ಮಠಗಳನ್ನೂ, ಅಲ್ಲಿ ನೆಲೆಸಿರುವ ಸಂನ್ಯಾಸಿಗಳ ಸಂಘಬದ್ಧ ಜೀವನವನ್ನೂ ಕಣ್ಣಾರೆ ಕಂಡರು. ಅದನ್ನು ನೋಡಿದ ಆ ದಯಾಪೂರಿತ ಮಾತೃಹೃದಯ ತನ್ನ ಮಕ್ಕಳ ಹೀನದೀನ ಸ್ಥಿತಿಯನ್ನು ನೆನೆದು ಅವರಿಗಾಗಿ ಮಮ್ಮಲ ಮರುಗಿತು. ಕಣ್ಣೀರು ಸುರಿಸುತ್ತ ತಮ್ಮ ಆರಾಧ್ಯದೈವರಾದ ಶ್ರೀರಾಮಕೃಷ್ಣರನ್ನು ಅವರು ಹೀಗೆ ಬೇಡಿಕೊಂಡರು:

"ಠಾಕುರ್, ನೀವು ಭೂಮಿಗೆ ಬಂದು ಲೀಲೆಯನ್ನಾಡಿ, ಆನಂದದಿಂದ ಬಾಳಿ ಹೋಗಿಬಿಟ್ಟಿರಿ. ಅಲ್ಲಿಗೇ ಎಲ್ಲವೂ ಮುಗಿದುಹೋಯಿತೆ? ಹಾಗಿದ್ದಲ್ಲಿ, ಇಷ್ಟೊಂದು ಕಷ್ಟಪಟ್ಟು ನೀವು ಈ ಜಗತ್ತಿಗೆ ಬರುವ ಆವಶ್ಯಕತೆಯಾದರೂ ಏನಿತ್ತು? ಕಾಶಿ ಬೃಂದಾವನಗಳಲ್ಲಿ ನೋಡಿದೆ, ಅಲ್ಲಿನ ಸಾಧುಗಳು ಭಿಕ್ಷೆ ಪಡೆದು ಉಣ್ಣುತ್ತಾರೆ, ಅಲೆದಾಡಿ ಬಂದು ಮರದ ಕೆಳಗೆ ಬಿಡಾರ ಹೂಡುತ್ತಾರೆ. ಈ ಬಗೆಯ ಸಾಧುಗಳ ಸಂಖ್ಯೆಗೇನು ಕಮ್ಮಿಯೇ, ಬೇಕಾದಷ್ಟಿದ್ದಾರೆ. ಆದರೆ ನಿಮ್ಮ ಹೆಸರಿನಲ್ಲಿ ಸಕಲವನ್ನೂ ತ್ಯಜಿಸಿರುವ ನಿಮ್ಮ ಮಕ್ಕಳು ಒಂದು ತುತ್ತು ಅನ್ನಕ್ಕೂ ಅಲೆದಾಡುವುದನ್ನು ನಾನು ಈ ಕಣ್ಣಿನಿಂದ ನೋಡಲಾರೆ. ನಿಮ್ಮಲ್ಲಿ ನಾನು ಬೇಡುವುದು ಇಷ್ಟೇ. ನಿಮ್ಮ ಪವಿತ್ರ ಹೆಸರನ್ನು ಸ್ಮರಿಸುತ್ತ ತ್ಯಾಗಜೀವನವನ್ನು ಕೈಗೊಳ್ಳಲು ಮುಂದೆ ಬಂದಿರುವವರಿಗೆ ಸಾಕಷ್ಟು ಉಣ್ಣಲು ಆಹಾರ, ತೊಡಲು ವಸ್ತ್ರಗಳ ಅಭಾವ ಎಂದಿಗೂ ಆಗದಿರಲಿ. ಅವರೆಲ್ಲ ನಿಮ್ಮ ಬೋಧನೆಯ ಪ್ರಕಾರ ಸಾಧುಜೀವನ ನಡೆಸುತ್ತ ಒಂದು ಕಡೆ ನೆಲಸಲಿ. ಸಂಸಾರದ ದುಃಖದಿಂದ ಬೆಂದ ಜನ ಅವರ ಬಳಿ ಬಂದು, ಅವರ ಮೂಲಕ ನಿಮ್ಮ ಸಂದೇಶವನ್ನು ಆಲಿಸಿ ಶಾಂತಿ ಪಡೆಯಲಿ. ಇದಕ್ಕಾಗಿಯೇ ಅಲ್ಲವೆ, ಗುರುದೇವ, ನೀವು ಅವತರಿಸಿದ್ದು. ಅದನ್ನು ಬಿಟ್ಟು ನಿಮ್ಮ ಮಕ್ಕಳು ಅಲ್ಲಿ ಇಲ್ಲಿ ಅಲೆದಾಡುವುದನ್ನು ಕಂಡು ನನ್ನ ಕರುಳು ಕಿತ್ತುಬರುತ್ತಿದೆ."

ಎಂಥ ಪ್ರಾರ್ಥನೆಯಿದು! ಎಂಥ ಕಳಕಳಿ! ತಾಯಿಯ

ಮಮತೆ ಮತ್ತು ದಯೆ ಅಡಗಿದ್ದವು ಇದರಲ್ಲಿ! ಹಾಗೆಯೇ ಈ ಪ್ರಾರ್ಥನೆ ಅತ್ಯಂತ ಶಕ್ತಿಯುತವೂ ಪ್ರಭಾವಶಾಲಿಯೂ ಆಗಿತ್ತು. ಮುಂದೆ ಶ್ರೀಮಾತೆಯವರೇ ಆ ಪ್ರಾರ್ಥನೆಯ ಫಲದ ಬಗ್ಗೆ ತಮ್ಮ ಭಕ್ತರಿಗೆ ಒಮ್ಮೆ ಹೀಗೆ ಹೇಳಿದರು: "ಹೀಗೆ ನಾನು ಗುರುದೇವರಲ್ಲಿ ಬೇಡಿಕೊಂಡ ಫಲವಾಗಿಯೇ, ನರೇಂದ್ರ ನಿಧಾನವಾಗಿ ಇವೆಲ್ಲವನ್ನೂ, ಅಂದರೆ ಮಠ, ಆಶ್ರಮ ಮೊದಲಾದುವುಗಳನ್ನು ಮಾಡಿದ." ಶ್ರೀಮಾತೆಯವರ ಸಹಚಾರಣಿಯಾಗಿದ್ದ ಯೋಗಿನ್‌ಮಾ ಮುಂದೊಮ್ಮೆ ಆಗಿನ್ನೂ ಬಾಲಕನಾಗಿದ್ದ ಸ್ವಾಮಿ ಶಾರದೇಶಾನಂದರಿಗೆ ಹೀಗೆ ಹೇಳುತ್ತಾಳೆ: "ಈ ಮಠ, ಆಶ್ರಮ ಇವೆಲ್ಲವನ್ನೂ ನೋಡುತ್ತಿದ್ದೀಯಲ್ಲ, ಇವೆಲ್ಲವೂ ಶ್ರೀಮಾತೆಯವರ ಕೃಪೆಯಿಂದಲೇ ಆದದ್ದು. ಶ್ರೀಮಾತೆಯವರು ಕಲ್ಲುಕರಗುವಂತೆ ಆರ್ತರಾಗಿ ಶ್ರೀರಾಮಕೃಷ್ಣರನ್ನು ಬೇಡಿಕೊಂಡರು, 'ಗುರುದೇವ, ನನ್ನ ಮಕ್ಕಳಿಗೆ ನಿಲ್ಲಲು ಒಂದು ಸೂರು, ಉಣ್ಣಲು ಆಹಾರ – ಇವುಗಳ ವ್ಯವಸ್ಥೆ ಮಾಡಿಕೊಡು' ಎಂದು. ಅವರ ಬಯಕೆ ಈಗ ಪೂರ್ಣವಾಗಿದೆ."



ಬಾರಾನಗರ ಮಠದ ಕಟ್ಟಡ

## ಬಾರಾನಗರ ಮಠದಲ್ಲಿ ತಪಸ್ಸಿನ ಜೀವನ

ಸ್ವಾಮಿ ಪ್ರಭಾನಂದಜಿ ಅವರು ರಾಮಕೃಷ್ಣ ಮಹಾಸಂಘದ ಒಬ್ಬ ಮುಖ್ಯ ಚರಿತ್ರಕಾರರು. ಅವರು ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣರ ದಿವ್ಯಲೀಲೆಯ ವಿವಿಧ ಘಟ್ಟಗಳು ರಾಮಕೃಷ್ಣ ಸಂಘದ ಉಗಮದ ಜೊತೆಗೆ ಸೇರಿಕೊಂಡಿರುವುವು. ಅದಕ್ಕೆ ಫಲವತ್ತಾದ ನೆಲ, ಬೀಜ, ನೀರು ಸಿಕ್ಕು ಅದರ ಬೇಲಿ ಮಾತ್ರ ಬಾಕಿಯಿತ್ತು. ಅದು ಬಾರಾನಗರ ಮಠದ ಸ್ಥಾಪನೆಯ ಮೂಲಕ ದೊರಕಿತು."

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಅವರ ಅಸ್ಥಿಯನ್ನು ಭಕ್ತ ಬಲರಾಮ ಬಸುವಿನ ಮನೆಗೆ ಕೊಂಡೊಯ್ಯಲಾಯಿತು. ಆದರೆ ಶ್ರೀರಾಮಕೃಷ್ಣರ ಆದರ್ಶವನ್ನು ತಮ್ಮ ಬಾಳಿನಲ್ಲಿ ಅನುಷ್ಠಾನಕ್ಕೆ ತರಲು ಸಿದ್ಧರಾಗಿರುವ ಯುವ ಶಿಷ್ಯರಿಗೆ ಆಸರೆಯಾದರೂ ಎಲ್ಲಿದೆ? ಈ ಸಮಸ್ಯೆಯನ್ನು ಪರಿಹರಿಸಿದವರೂ ಶ್ರೀರಾಮಕೃಷ್ಣರೇ. ಒಂದು ದಿನ ಅವರು ತಮ್ಮ ನಿಕಟ ಭಕ್ತ ಸುರೇಶಚಂದ್ರ ಮಿತ್ರನಿಗೆ ದರ್ಶನ ಕೊಟ್ಟು ಹೀಗೆ ಹೇಳಿದರು: "ನನ್ನ ಹುಡುಗರು ಬೀದಿ ಬೀದಿ ತಿರುಗುತ್ತಿದ್ದಾರೆ, ನೀನು ಏನು ತಾನೆ ಮಾಡುತ್ತಿದ್ದೀಯೆ? ಅವರ ದುರವಸ್ಥೆಯನ್ನು ನೋಡು. ಅದಕ್ಕೆ ಏನಾದರೂ ಪರಿಹಾರವನ್ನು ಹುಡುಕು." ಇದಾದ ನಂತರ ಸುರೇಶಚಂದ್ರ ಯುವಕ ಶಿಷ್ಯರ ವಸತಿಗಾಗಿ ಒಂದು ಮನೆಗೆ ಬೇಕಾದ ಬಾಡಿಗೆಯನ್ನು ನೀಡಲು ಮುಂದೆ ಬಂದನು. ಅವನ ಸಹಾಯದಿಂದ ಬಾರಾನಗರ ಎಂಬ ಬಡಾವಣೆಯಲ್ಲಿ ಒಂದು ಪಾಳು ಬಿದ್ದ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಲಾಯಿತು. ಅದಕ್ಕೊಂದು ಸರಿಯಾದ ಅಂಚೆ ವಿಳಾಸವೂ ಇರಲಿಲ್ಲ. ಅದಲ್ಲದೆ ಸ್ಥಳೀಯ ಜನರ ಉದಾಸೀನತೆ, ಸಂದೇಹ ಪ್ರವೃತ್ತಿ ಮತ್ತು ವಿರೋಧ ಬೇರೆ. ಬಾಡಿಗೆ ತಿಂಗಳಿಗೆ ಕೇವಲ ೧೦ ರೂಪಾಯಿಗಳು. ಆ ಕಟ್ಟಡದ ಕೆಳಗಿನ ಭಾಗವೆಲ್ಲ ಮುಳ್ಳುಕಂಟೆಗಳಿಂದ ತುಂಬಿತ್ತು; ತೋಳ ಮತ್ತು ಹಾವುಗಳಿಗೆ ಆವಾಸಸ್ಥಾನವಾಗಿತ್ತು. ಯುವಸಂನ್ಯಾಸಿಗಳು ಕಟ್ಟಡದ ಮೇಲುಭಾಗದಲ್ಲಿ ವಾಸವಾಗಿದ್ದರು. ಅಲ್ಲೊಂದು ದೊಡ್ಡ ಅಂಗಣ, ಪೂಜಾಗೃಹ ಮತ್ತು ಕೆಲವು ಕೊಠಡಿಗಳು ಇದ್ದವು. ಯುವಸಂನ್ಯಾಸಿಗಳು ಶ್ರೀರಾಮಕೃಷ್ಣರ ಅಸ್ಥಿಯನ್ನು ಇಲ್ಲಿಗೆ ತಂದು ಪೂಜಾಗೃಹದಲ್ಲಿ ಪೂಜಿಸಲಾರಂಭಿಸಿದರು. ಶ್ರೀರಾಮಕೃಷ್ಣರ ಭಾವಚಿತ್ರವನ್ನು ಮಂಚದ ಮೇಲೆ ಹಾಸಿಗೆಯ ಮೇಲೆ ಇಟ್ಟು, ಕೆಳಗಡೆ ಅವರ ಪಾದರಕ್ಷೆಗಳನ್ನು ಇರಿಸಲಾಯಿತು. ಹೀಗೆ ೧೮೮೬ ರ ಅಕ್ಟೋಬರ್ ೧೯ ರಂದು ಬಾರಾನಗರ ಮಠ ಸ್ಥಾಪನೆಯಾಯಿತು. ಇದೇ ರಾಮಕೃಷ್ಣ ಮಹಾಸಂಘದ ಮೊದಲ ಮಠ. ಇದಕ್ಕೆಲ್ಲ ಕಾರಣಕರ್ತನಾದ ಸುರೇಶಚಂದ್ರನನ್ನು ನೆನೆಸಿಕೊಳ್ಳುತ್ತ ಮುಂದೊಮ್ಮೆ ಸ್ವಾಮಿ ವಿವೇಕಾನಂದರು ತಮ್ಮ ಶಿಷ್ಯನಾದ ಶರತ್ ಚಂದ್ರ ಚಕ್ರವರ್ತಿಗೆ ಹೀಗೆ ಹೇಳುತ್ತಾರೆ: "ನೀನು ಖಂಡಿತವಾಗಿಯೂ ಸುರೇಶನ ಹೆಸರು ಕೇಳಿರಬೇಕು. ಒಂದು ದೃಷ್ಟಿಯಲ್ಲಿ ನೋಡಿದರೆ ಅವನೇ ಮಠದ ಸ್ಥಾಪಕನೆಂದು ತಿಳಿ."

ಅಲ್ಲಿ ಆ ಯುವಸಂನ್ಯಾಸಿಗಳು ನಡೆಸಿದ ಜೀವನ ಅತ್ಯಂತ ಕಠೋರವಾದ ಹಾಗೂ ತ್ಯಾಗ, ವೈರಾಗ್ಯ ಮತ್ತು ತಪಸ್ಯೆಯ ಭಾವನೆಗಳಿಂದ ಪರಿಪೂರ್ಣವಾಗಿರುವ ಪವಿತ್ರ ಜೀವನ. ಅಲ್ಲಿನ ದಿನಗಳನ್ನು ಸ್ವಾಮಿ ವಿವೇಕಾನಂದರು ಹೀಗೆ ನೆನಪಿಸಿಕೊಳ್ಳುತ್ತಾರೆ: "ನಾವು ಬೆಳಗ್ಗೆ ಮೂರು ಗಂಟೆಗೇ ಏಳುತ್ತಿದ್ದವು. ನಮ್ಮ ಪ್ರಾತರ್ವಿಧಿಗಳನ್ನು ಪೂರೈಸಿಕೊಂಡು ಪೂಜಾಗೃಹದಲ್ಲಿ ಕುಳಿತು ಜಪಧ್ಯಾನಗಳಲ್ಲಿ ತಲ್ಲೀನರಾಗುತ್ತಿದ್ದೆವು. ಆ ಕಾಲದಲ್ಲಿ ನಾವು

ಹೊಂದಿದ್ದ ವೈರಾಗ್ಯಭಾವನೆ ಎಷ್ಟು ಉತ್ಕಟವಾಗಿತ್ತು! ಈ ಜಗತ್ತು ಇದೆಯೋ ಇಲ್ಲವೋ ಎಂಬ ಪರಿವೆ ಕೂಡ ಇರಲಿಲ್ಲ ನಮಗೆ! ರಾಮಕೃಷ್ಣಾನಂದರು (ವಿವೇಕಾನಂದರ ಒಬ್ಬ ಸಹೋದರ ಸಂನ್ಯಾಸಿಗಳು) ರಾಮಕೃಷ್ಣರ ಪೂಜೆ ಮತ್ತು ಇತರ ಸೇವಾಕಾರ್ಯಗಳಲ್ಲಿ ಹಗಲೂ ಇರುಳೂ ನಿರತರಾಗಿರುತ್ತಿದ್ದರು. ಮನೆಯಲ್ಲಿ ಯಜಮಾನಿ ಹೇಗೋ ಹಾಗೆ ನಮ್ಮ ಮಠದಲ್ಲಿ ರಾಮಕೃಷ್ಣಾನಂದರು. ಶ್ರೀರಾಮಕೃಷ್ಣರ ಪೂಜೆ, ನೈವೇದ್ಯಗಳಿಗೆ ಬೇಕಾದ ಪರಿಕರಗಳನ್ನು ಭಿಕ್ಷೆ ಬೇಡಿಯಾದರೂ ಹೊತ್ತು ತರುತ್ತಿದ್ದವರು ಬೇರೆ ಯಾರೂ ಅಲ್ಲ, ಸ್ವಾಮಿ ರಾಮಕೃಷ್ಣಾನಂದರೇ. ಕೆಲವು ದಿನಗಳು ನಮ್ಮ ಜಪ–ಧ್ಯಾನಗಳು ಮಧ್ಯಾಹ್ನ ನಾಲ್ಕು–ಐದು ಗಂಟೆಯವರೆಗೂ ಸಾಗುತ್ತಿದ್ದವು. ರಾಮಕೃಷ್ಣಾನಂದರು ಅಡಿಗೆ ಮಾಡಿಟ್ಟುಕೊಂಡು ಕಾಯುತ್ತ ಕುಳಿತಿರುತ್ತಿದ್ದರು. ಕಡೆಗೆ ನಮ್ಮೆಡೆಗೆ ಬಂದು ಬಲಪ್ರಯೋಗ ಮಾಡಿಯಾದರೂ ಊಟ ಮಾಡಲೆಂದು ಎಳೆದುಕೊಂಡು ಹೋಗುತ್ತಿದ್ದರು. ಹಣದ ಅಭಾವದಿಂದ ನಾನು ಮಠವನ್ನೇ ಮುಚ್ಚಿಬಿಡಲು ಹವಣಿಸುತ್ತಿದ್ದೆ. ಇದಕ್ಕೆ ರಾಮಕೃಷ್ಣಾನಂದರು ಎಂದಿಗೂ ಒಪ್ಪಲಿಲ್ಲ. ರಾಮಕೃಷ್ಣಾನಂದರೇ ಮಠದ ಕೇಂದ್ರಬಿಂದು ಎಂದು ತಿಳಿ. ಕೆಲವೊಮ್ಮೆ ಮಠದಲ್ಲಿ ಒಂದು ಕಾಳೂ ಇರುತ್ತಿರಲಿಲ್ಲ. ಭಿಕ್ಷೆ ಬೇಡಿ ಅಕ್ಕಿಯನ್ನು ತಂದರೆ, ಅನ್ನದೊಂದಿಗೆ ಹಾಕಿಕೊಳ್ಳಲು ಒಂದು ಹಿಡಿ ಉಪ್ಪೂ ಇರುತ್ತಿರಲಿಲ್ಲ. ಆದರೆ ನಾವ್ಯಾರೂ ಅದನ್ನು ಗಣನೆಗೇ ತೆಗೆದುಕೊಳ್ಳುತ್ತಿರಲಿಲ್ಲ. ನಾವೆಲ್ಲ ಆಧ್ಯಾತ್ಮಿಕ ಸಾಧನೆಯ ಮಹಾಪ್ರವಾಹದಲ್ಲಿ ಕೊಚ್ಚಿಹೋಗಿಬಿಟ್ಟಿದ್ದೆವು. ತಿಂಗಳಗಟ್ಟಲೆ, ಸೊಪ್ಪು, ಅನ್ನ, ಉಪ್ಪು – ಇವೇ ನಮ್ಮ ಆಹಾರವಾಗಿರುತ್ತಿತ್ತು. ಎಂತಹ ಅದ್ಭುತ ದಿನಗಳು ಅವು! ಆ ದಿನಗಳ ತಪಸ್ಯೆಯು ದೇವತೆಗಳನ್ನೂ ಭಯಪಡಿಸುವಂತಿತ್ತು. ಇನ್ನು ಇತರ ಸಾಧಾರಣ ಮಾನವರ ಪಾಡೇನು?"

ಶ್ರೀರಾಮಕೃಷ್ಣರೇ ಈ ಯುವಕ ಶಿಷ್ಯರಿಗೆ ಕಾಷಾಯ ವಸ್ತ್ರಗಳನ್ನು ಪ್ರದಾನ ಮಾಡಿದ್ದರೂ ಅವರೆಲ್ಲರೂ ವೇದೋಕ್ತವಾದ ಅಧಿಕೃತ ವಿಧಿಗಳ ಮೂಲಕ ವಿಧ್ಯುಕ್ತ ಸಂನ್ಯಾಸ ಸ್ವೀಕರಿಸಿದ್ದು ೧೮೮೭ ರ ಜನವರಿ ಮೂರನೆಯ ವಾರದಲ್ಲಿ. ಅವರಲ್ಲಿ ಕಾಳೀಪ್ರಸನ್ನ (ಮುಂದೆ ಸ್ವಾಮಿ ಅಭೇದಾನಂದ) ಉತ್ತರದೇಶದಲ್ಲಿ ಪ್ರಚಲಿತವಿದ್ದ ಸಂನ್ಯಾಸ ವಿಧಿ ಮಂತ್ರಗಳನ್ನು ಸಂಗ್ರಹಿಸಿದ್ದನು. ಅವುಗಳನ್ನು ಉಚ್ಚರಿಸುತ್ತ, ವಿರಜಾ ಹೋಮದ ಮೂಲಕ ಈ ಯುವಕರು ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿದರು. ಹಳೆಯ ಬಾಳನ್ನು ಸಂಪೂರ್ಣವಾಗಿ ತ್ಯಜಿಸುವ ಸಂಕೇತವಾಗಿ ನೂತನ ಹೆಸರುಗಳನ್ನು ಪಡೆದುಕೊಂಡರು. ನೇತಾರನಾದ ನರೇಂದ್ರ, ಸ್ವಾಮಿ ವಿವೇಕಾನಂದ ಎಂಬ ಹೆಸರನ್ನು ಪಡೆದುಕೊಂಡರು.

### ಸಾಗರೋತ್ತರದಿಂದ ಸಂದೇಶವಾಹಿನಿ

ಬಾರಾನಗರ ಮಠದಲ್ಲಿ ಕೆಲವು ದಿನಗಳನ್ನು ಕಳೆದ ಮೇಲೆ ಸ್ವಾಮಿ ವಿವೇಕಾನಂದರು ಭಾರತದ ಉದ್ದಗಲದಲ್ಲಿ ಸಂಚರಿಸಿ ಭಾರತದ ನೈಜ ಪರಿಸ್ಥಿತಿಯ ಪರಿಚಯ ಮಾಡಿಕೊಂಡರು. ನಂತರ ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿ ಭಾರತದ ಧರ್ಮ ಮತ್ತು ಸಂಸ್ಕೃತಿಗಳ ಹಿರಿಮೆ ಗರಿಮೆಗಳನ್ನು ಜಾಗತಿಕ ರಂಗದಲ್ಲಿ ಎತ್ತಿಹಿಡಿದರು. ಈತನ್ಮಧ್ಯೆ ಮಠವನ್ನು ಆಲಂಬಜಾರ್ ಎಂಬ ಪ್ರದೇಶಕ್ಕೆ ವರ್ಗಾಯಿಸಲಾಯಿತು. ಪಶ್ಚಿಮ ದೇಶಗಳಲ್ಲಿ ವೇದಾಂತ ಸಂದೇಶವನ್ನು ಬೋಧಿಸುತ್ತಿದ್ದ ಸ್ವಾಮಿ ವಿವೇಕಾನಂದರು ಭಾರತದಲ್ಲಿ ನಡೆಯಬೇಕಾದ ಮಹಾನ್ ಕಾರ್ಯದ ಬಗ್ಗೆಯೂ ಗಮನ ಕೊಟ್ಟಿದ್ದರು. ಶ್ರೀರಾಮಕೃಷ್ಣರ ಹೆಸರಿನಲ್ಲಿ ಸೇವೆ ಮತ್ತು ತ್ಯಾಗ ವ್ರತಧಾರಿಗಳಾದ ಸಂನ್ಯಾಸಿಗಳು ಮುಂದೆ ಕೈಗೊಳ್ಳಬೇಕಾದ ಒಂದು ವಿಶಿಷ್ಟ ಜನ–ಜಾಗರಣ ಆಂದೋಲನದ ಬಗ್ಗೆ ತಮ್ಮ ಚಿಂತನೆಗಳನ್ನು ಪತ್ರಗಳ ಮೂಲಕ ತಮ್ಮ ಸೋದರ ಸಂನ್ಯಾಸಿಗಳಿಗೆ ಮತ್ತು ಚೆನ್ನೈ ನಗರದ ಶಿಷ್ಯರಿಗೆ ಹರಿಸುತ್ತ ಅವರನ್ನು ಈ ಕಾರ್ಯದ ಹರಿಕಾರರಾಗುವಂತೆ ಅವರನ್ನು ಹುರಿದುಂಬಿಸಿದರು.

೧೮೯೪ ರ ಸೆಪ್ಟೆಂಬರ್ ೨೯ ರಂದು ತಮ್ಮ ಪತ್ರದಲ್ಲಿ ಸ್ವಾಮೀಜಿ ಹೀಗೆ ಬರೆಯುತ್ತಾರೆ: "ನಮ್ಮ ಕ್ಷೇತ್ರ ಭಾರತವೇ ಆಗಿದೆ. ವಿದೇಶದಲ್ಲಿ ಪಡೆದುಕೊಂಡ ಉತ್ತೇಜನ ಕೂಡ ಭಾರತವನ್ನು ಎಚ್ಚೆತ್ತುವುದಕ್ಕಾಗಿಯೇ." ತಮ್ಮ ಭಾರತದ ಯೋಜನೆಗೆ ಬೇಕಾದ ರೂಪರೇಖೆಯನ್ನು ತಮ್ಮ ಶಿಷ್ಯರಿಗೆ ಸ್ವಾಮೀಜಿ ಪರಿಚಯಿಸಿದ್ದು ಈ ಪತ್ರಗಳ ಮೂಲಕವೇ. ಅವರು ೧೮೯೩ ರ ಜುಲೈ ೧೦ ರ ಪತ್ರದಲ್ಲಿ ಮದ್ರಾಸಿನ ತಮ್ಮ ಅನುಯಾಯಿಗಳಿಗೆ ಹೀಗೆ ಬರೆಯುತ್ತಾರೆ: "ಭಾರತ ಮಾತೆಗೆ ಕನಿಷ್ಠಪಕ್ಷ ಒಂದು ಸಾವಿರ ಯುವಕರ ಬಲಿಯಾದರೂ ಬೇಕು. ಪುರುಷಸಿಂಹರು! ಮೂರ್ಖರಲ್ಲ! ಮನಸ್ಸಿನಲ್ಲಿಡಿ... ನಿಮ್ಮ ಪೂರ್ವಿಕರ ಕಿರುಕುಳದಿಂದ ಪಶು ಸಮಾನಕ್ಕೆ ಇಳಿದವರನ್ನು ಮಾನವರನ್ನಾಗಿ ಮಾಡುವುದಕ್ಕಾಗಿಯೂ ಪ್ರಾಣಹೋಗುವವರೆಗೂ ಹಿಂಜರಿಯದೆ ಹೋರಾಡುವ ಸ್ವಾರ್ಥತ್ಯಾಗಿಗಳಾದ ಎಷ್ಟು ಮಂದಿ ಯುವಕರನ್ನು ಈಗ ಮದ್ರಾಸು ಕೊಡುವುದು?"

೧೮೯೪ ರ ಜನವರಿ ೨೪ ರ ಪತ್ರದಲ್ಲಿ ಸ್ವಾಮೀಜಿ ತಮ್ಮ ಅನುಯಾಯಿಗಳಿಗೆ ಈ ಎಚ್ಚರಿಕೆಯನ್ನು ನೀಡುತ್ತಾರೆ: "ಪ್ರತಿಯೊಬ್ಬನ ಮನೆಯ ಬಾಗಿಲಿಗೂ ಉಚ್ಚ ಧ್ಯೇಯಗಳನ್ನು ಕೊಂಡೊಯ್ಯುವ ಯಂತ್ರವೊಂದನ್ನು ಚಲಿಸುವಂತೆ ಮಾಡುವುದೇ ನನ್ನ ಜೀವನದ ಹೆಬ್ಬಯಕೆ... ನಾವು ರಾಸಾಯನಿಕ ದ್ರವ್ಯಗಳನ್ನು ಸೇರಿಸೋಣ. ಪ್ರಕೃತಿ ನಿಯಮದಂತೆ ಅನಂತರ ಅದೇ ಹರಳುಗಟ್ಟುವುದು. ಕಷ್ಟಪಟ್ಟು ಕೆಲಸ ಮಾಡಿ. ಚಂಚಲರಾಗದಿರಿ. ದೇವರಲ್ಲಿ ನಂಬಿಕೆ ಇಡಿ. ಕಾರ್ಯಕ್ಕೆ ಕೈಹಾಕಿ... 'ಧರ್ಮವನ್ನು ಅಲ್ಲಗಳೆಯದೆ ಜನಸಾಮಾನ್ಯರ ಉನ್ನತಿ ಆಗಬೇಕು' ಎಂಬ ಆದರ್ಶವನ್ನು ಮರೆಯಬೇಡಿ."

೧೮೯೭ ರ ಏಪ್ರಿಲ್ ೨೭ ರಂದು ಆಲಂಬಜಾರ್ ಮಠದ ನಿವಾಸಿಗಳಿಗೆ ಬರೆದ ಒಂದು ಪತ್ರದಲ್ಲಿ ಸ್ವಾಮೀಜಿ ಹೀಗೆ ಬರೆಯುತ್ತಾರೆ: "ನಿಮ್ಮೆಲ್ಲರ ಜವಾಬ್ದಾರಿಯನ್ನು ಗುರುದೇವರು ನನ್ನ ಮೇಲೆ ವಹಿಸಿ ಹೋಗಿದ್ದಾರೆ; ನಿಮ್ಮಲ್ಲಿ ಬಹುತೇಕ ಮಂದಿಗೆ ಅರಿವಿಲ್ಲದಿದ್ದರೂ, ಮುಂದೆ ನೀವೆಲ್ಲ ಜಗತ್ತಿನ ಒಳಿತಿಗಾಗಿ ಮಹಾನ್ ಕೊಡುಗೆಯನ್ನು ನೀಡಲಿದ್ದೀರಿ." *(ಮುಂದುವರಿಯುವುದು)*